**OS No. 306/2013**
**PW-1**

ದಿನಾಂಕಃ **06-06-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ. ಎ ಎಲ್ ಎಸ್ ವಕೀಲರಿಂದ.

ದಿನಾಂಕಃ 05.05.1955ರ ವಿಭಾಗ ಪತ್ರದಲ್ಲಿ ಎಷ್ಟು ಆಸ್ತಿಗಳು ವಿಭಾಗವಾಗಿದ್ದವು ಎಂದು ನನಗೆ ನೆನಪಿಲ್ಲ. ದಿನಾಂಕಃ 05.05.1955ರ ವಿಭಾಗ ಪತ್ರದಲ್ಲಿ ಯಾರು ಯಾರಿಗೆ ಯಾವ ಯಾವ ಆಸ್ತಿಗಳು ವಿಭಾಗವಾಗಿ ಬಂದಿರುತ್ತವೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿದಾರರಿಗೆ 28 ಭಾವ ಚಿತ್ರಗಳನ್ನು ತೋರಿಸಲಾಗಿ ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಡಿ-1 ರಿಂದ ನಿಡಿ-28 ಎಂದು ಗುರುತಿಸಲಾಯಿತು. ನಿಡಿ-1 ರಿಂದ 28 ರ ಭಾವ ಚಿತ್ರಗಳಲ್ಲಿ ಕಾಣುವ ಜಾಗದಲ್ಲಿ ಮನೆಯನ್ನು ನಿರ್ಮಿಸಬಾರದು ಎಂದು ನ್ಯಾಯಾಲಯದಿಂದ ತಾತ್ಕಾಲಿಕ ಪ್ರತಿಬಂದ ಕಾಜ್ಞೆಯನ್ನು ತೆಗೆದುಕೊಂಡಿದ್ದೆವು ಎಂದರೆ ಸರಿ. ನ್ಯಾಯಾಲಯವು ತಾತ್ಕಾಲಿಕ ಪ್ರತಿಬಂದ ಕಾಜ್ಞೆಯನ್ನು ನೀಡಿದಾಗ ಕೆಲಸವು ತಡೆದಿತ್ತು ಎಂದರೆ ಸರಿ. ಸದರಿ ಅರ್ಜಿಯು ನ್ಯಾಯಾಲಯದಲ್ಲಿ ವಜಾಗೊಂಡು ತಾತ್ಕಾಲಿಕ ಪ್ರತಿಬಂದ ಕಾಜ್ಞೆಯು ತೆರವುಗೊಂಡಿತ್ತು ಎಂದರೆ ಸರಿ. ಸದರಿ ಅರ್ಜಿಯು ವಜಾಗೊಂಡ ಮೇರೆಗೆ ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿಯು ಸಹ ವಜಾಗೊಂಡಿತ್ತು ಎಂದರೆ ಸರಿ. ಸದರಿ ಮೇಲ್ಮನವಿ ಆದೇಶದ ವಿರುದ್ಧ ನಾವು ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿಬಂದ ಕಾಜ್ಞೆಯು ತೆರವುಗೊಂಡ ನಂತರ ಪ್ರಕರಣವು ಚಾಲ್ತಿಯಲ್ಲಿ ಇದ್ದಂತೆ ಸದರಿ ಮನೆಯನ್ನು ಕಟ್ಟಿ ಪೂರ್ಣಗೊಳಿಸಿರುತ್ತಾರೆ ಎಂದರೆ ಸರಿ. ಸದರಿ ಮನೆಯು ಪೂರ್ಣಗೊಂಡ ನಂತರ ಪ್ರತಿವಾದಿಯು ಗೃಹ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ತಿ.ನರಸೀಪುರ